ಪಡೆದಿದ್ದರಿಂದ ಆಯ್ಕೆ ಪಟ್ಟಿಯಿಂದ ಯಾರನ್ನೂ ಐಎಎಸ್‌ಗೆ ನೇಮಕ ಮಾಡಲು ಸಾಧ್ಯವಾಗಲಿಲ್ಲ.

ಈ) ಆಯ್ಕೆ ಪಟ್ಟಿಯ ಕುರಿತಾಗಿ, ಸಂಬಂಧಪಟ್ಟ ಕೆಎಎಸ್ ಅಧಿಕಾರಿಗಳೇ ನ್ಯಾಯಮಂಡಳಿ: ದೆಹಲಿ ಉಚ್ಚನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿದ್ದರಿಂದ ಮುಂದಿನ ನೇಮಕಾತಿ ಕ್ರಮವು ವಿಳಂಬವಾಗಿದೆಯೇ ಹೊರತಾಗಿ, ಇದಕ್ಕೆ ಇಲಾಖಾ ಅಧಿಕಾರಿಗಳಾಗಲೀ, ಅಥವಾ ಸರ್ಕಾರವಾಗಲೀ ಹೊಣೆಯಲ್ಲ. ಆದ್ದರಿಂದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಇತ್ತೀಚೆಗೆ ದೆಹಲಿ ಉಚ್ಚನ್ಯಾಯಾಲಯವು ದಿನಾಂಕ 3-9-98ರ ತನ್ನ ತಡೆಯಾಜ್ಞೆಯನ್ನು ತೆರವು ಮಾಡಿದೆ ಮತ್ತು ಅಂತಿಮ ತೀರ್ಪಿಗೆ ಒಳಪಟ್ಟು ಕೇಂದ್ರೀಯ ಆಡಳಿತ ನ್ಯಾಯಮಂಡಳಿಯ ಆದೇಶವನ್ನು ಅನುಷ್ಠಾನಗೊಳಿಸುವಂತೆ ನಿರ್ದೇಶಿಸಿದೆ. ಈ ಬಗ್ಗೆ ಸರ್ಕಾರವು ಕ್ರಮ ತೆಗೆದುಕೊಳ್ಳುತ್ತಿದೆ.

ಮೈಸೂರಿನ ಕರ್ನಾಟಕ ಬಾಲ್ ಬೇರಿಂಗ್ ಕಂಪನಿ ಮತ್ತು ಐಡಿಯಲ್ ಜಾವಾ ಕಾರ್ಖಾನೆಗಳನ್ನು ತೆರೆಯುವುದು.

3014:(4037)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಕರ್ನಾಟಕ ಬಾಲ್ ಬೇರಿಂಗ್ ಕಂಪನಿ ಮತ್ತು ಐಡಿಯಲ್ ಜಾವಾ ಕಾರ್ಖಾನೆಗಳನ್ನು ತೆರೆಯುವ ಬಗ್ಗೆ ಸರ್ಕಾರ ಇದುವರೆವಿಗೆ ಕೈಗೊಂಡಿರುವ ಕ್ರಮಗಳೇನು, (ಸಂಪೂರ್ಣ ವಿವರಗಳನ್ನು ಒದಗಿಸುವುದು)

ಆ) ಈ ಕಾರ್ಖಾನೆಗಳನ್ನು ತೆರೆಯಲು ಇನ್ನೂ ಬೇಕಾಗಿರುವ ಕಾಲಾವಧಿ ಎಷ್ಟು?

ಶ್ರೀ ಹೆಚ್.ಶಿವಪ್ಪ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಂಪನ್ಮೂಲ ಅಭಿವೃದ್ಧಿ ರಾಜ್ಯ ಮಂತ್ರಿಗಳು):

ಅ) **ಕರ್ನಾಟಕ ಬಾಲ್ ಬೇರಿಂಗ್ ಕಂಪನಿ.**

ಮೈಸೂರಿನ ಕರ್ನಾಟಕ ಬಾಲ್‌ಬೇರಿಂಗ್ ಕಂಪನಿಯು ರೋಗಗ್ರಸ್ತ

ಕಾರ್ಖಾನೆಯಾಗಿದ್ದು, ಕಾರ್ಖಾನೆಯ ಪುನಶ್ಚೇತನ ಬಗ್ಗೆ ಅಡಳಿತ ವರ್ಗದವರು ಬಿಐಎಫ್‌ಆರ್ ಮತ್ತು ಎಎಐಎಫ್‌ಆರ್ ಮುಂದೆ ಸಲ್ಲಿಸಿದ ಅರ್ಜಿಗಳು ಅನುಕ್ರಮಕಾಗಿ ದಿನಾಂಕ: 1-3-94 ಮತ್ತು 17-1-98ರಂದು ತಿರಿಸ್ಕರಿಸಲಾಗಿದೆ. ಮುಂಬಯಿ ಉಚ್ಚ ನ್ಯಾಯಾಲಯವು ಈಗಾಗಲೇ ಈ ಸಂಸ್ಥೆಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವುದರಿಂದ, ಈ ಕಾರ್ಖಾನೆಗೆ ಸಂಬಂಧಿಸಿದಂತೆ ಸರ್ಕಾರವು ಯವುದೇ ಕ್ರಮ ತೆಗೆದುಕೊಳ್ಳಲು ಬರುವುದಿಲ್ಲ.

ಮೆ: ಐಡಿಯಲ್ ಜಾವಾ (ಇಂಡಿಯಾ) ಲಿ.

ಈ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಲು ಅನೇಕ ಸಭೆಗಳನ್ನು ಕಾರ್ಮಿಕ ಆಯುಕ್ತರು ಮತ್ತು ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರು ಆಡಳಿತ ವರ್ಗ, ಕಾರ್ಮಿಕ ಸಂಘ ಮತ್ತು ಹಣಕಾಸು ಸಂಸ್ಥೆಗಳೊಡನೆ ಚರ್ಚಿಸಲಾಗಿದೆ. ಈ ಚರ್ಚೆಗನುಗುಣವಾಗಿ ಆಡಳಿತ ವರ್ಗದವರು ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವ ಬಗ್ಗೆ ಪ್ರಸ್ತಾಪನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಲವೊಂದು ಮಾರ್ಪಾಡುಗಳನ್ನು ಮಾಡಬೇಕೆಂದು ಸೂಚಿಸಿಲಾಗಿದೆ. ಚರ್ಚೆಯ ಹಿನ್ನೆಲೆಯಲ್ಲಿ ಆಡಳಿತವರ್ಗದವರು ಪರಿಷ್ಕೃತ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿದೆ. ಪರಿಷ್ಕೃತ ಪ್ರಸ್ತಾವನೆ ಬಂದ ನಂತರ ಈ ಬಗ್ಗೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಈ ವಿಷಯದಲ್ಲಿ ಶೀಘ್ರವಾಗಿ ಕ್ರಮತೆಗೆದುಕೊಳ್ಳಲಾಗುವುದು.

ಶಿವನಸಮುದ್ರದಲ್ಲಿ ವಿದ್ಯುತ್ ತಯಾರಿಸುವ ಯಂತ್ರಗಳು ರಿಪೇರಿ

3015:(4035)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿ ತಯಾರಿಸುವ ಯಂತ್ರಗಳಲ್ಲಿ ಯಾವ ಯಾವ ಯಂತ್ರಗಳು ರಿಪೇರಿಯಲ್ಲಿವೆ?

ಆ) ಈ ಯಂತ್ರಗಳು ಕೆಟ್ಟು ನಿಂತು ಎಷ್ಟು ವರ್ಷಗಳಾದುವು?

ಇ) ಈ ಯಂತ್ರಗಳಿಂದ ತಯಾರಿಸಲ್ಪಡುತ್ತಿದ್ದ ವಿದ್ಯುಚ್ಛಕ್ತಿ ಪ್ರಮಾಣ ಎಷ್ಟು?